◆ **ನೀವು ನಡೆದು ಬಂದ ದಾರಿಗೆ ಹಲವು ಕವಲುಗಳಿವೆ. ಆ ಎಲ್ಲವೂ ಒಂದೇ ಗುರಿಯ ಕಡೆಗೆ ಚಲಿಸುತ್ತವೆ ಅನ್ನೋದು ಮುಖ್ಯವಾದ ಸಂಗತಿ. ಜನಪರವಾದ ಯಾವುದೇ ಹೋರಾಟವೂ ಕರ್ನಾಟಕದಲ್ಲಿ ನಿಮ್ಮ ಭಾಗವಹಿಸುವಿಕೆ ಇಲ್ಲದೆ ಆಗಿಲ್ಲ. ಪತ್ರಿಕೋದ್ಯಮ, ಬೀದಿ ನಾಟಕಗಳು ಹಾಗೂ ರಂಗಭೂಮಿ, ಸಂಘಟನೆಗಳು, ಸಿನಿಮಾ ಪತ್ರಿಕೋದ್ಯಮ, ಜನಪರ ಹೋರಾಟಗಳು, ಕಲಾ ಇತಿಹಾಸ, ಸಾಹಿತ್ಯ ಹೀಗೆ. ಇಂಥ ಬಹುಮುಖಿಯಾದ ನಿಮ್ಮ ವೃತ್ತಿಜೀವನ ಶುರು ಆದದ್ದು ಮಲ್ಲಿಗೆಯಿಂದ. ಅದಕ್ಕೊಂದು ಹೊಸ ಸ್ವರೂಪವನ್ನೂ ನೀವು ಕೊಟ್ಟಿರಿ.ಇದಕ್ಕೂ ಮುಂಚೆ ನೀವು ಸ್ವಲ್ಪ ಕಾಲ ಪ್ರಜಾಮತದಲ್ಲೂ ಕೆಲಸ ಮಾಡಿದ್ದಿರಿ ಅಲ್ವಾ?**



ಹೌದು, 'ಪ್ರಜಾಮತ'ದಲ್ಲಿ ಮಕ್ಕಳ ಮತ್ತು ಮಹಿಳಾ ವಿಭಾಗವನ್ನು ನಾನು ನೋಡ್ಕೋತಾ ಇದ್ದೆ. ಇದು ಬಹುಶಃ 67–68ರ ಅವಧಿ. ಸ್ವಾರಸ್ಯಕರ ಸಂಗತಿ ಅಂದರೆ ಅದೇ ಅವಧಿಯಲ್ಲೇ ನಾನು ಎ.ಪಿ.ಎಸ್. ಸಂಜೆ ಕಾಲೇಜಿನಲ್ಲಿ ಪಿಯುಸಿ ಮುಗಿಸಿ ಸಂಜೆ ಕಾಲೇಜಿಗೂ ಸೇರಿದ್ದೆ. ಪತ್ರಿಕೋದ್ಯಮದಲ್ಲಿ ನನ್ನ ಜೀವನ ಆರಂಭ ಮಾಡಿದಾಗ ನನಗಿದ್ದದ್ದು ಎಸ್‌ಎಸ್‌ಎಲ್‌ಸಿ ಹಿನ್ನೆಲೆ ಮಾತ್ರ. ಸಂಜೆ ಕಾಲೇಜಿನಲ್ಲಿ ನನ್ನ ಸಹಪಾಠಿಗಳಾಗಿದ್ದವರು ಪುಂಡಲೀಕ ಹಾಲಂಬಿ, ಎಂ.ಎನ್. ವ್ಯಾಸರಾವ್, ತಾರಾಭಟ್, ಇಂದು ರಾಜಕಾರಣದಲ್ಲಿ ಇರುವ ಶ್ರೀಕಂಠಮೂರ್ತಿ, ಗಮಕಿ ಸತ್ಯನಾರಾಯಣ, ರತ್ನಾಕರ ಹೆಬ್ಬಾರ್ ಮೊದಲಾದವರು. ತಮಾಷೆ ಅಂದ್ರೆ ನನಗೆ ಬಿ.ಎ. ಪರೀಕ್ಷೆ ಬರೆದದ್ದು ನೆನಪಿದೆ. ಆದರೆ, ಅದರ ಫಲಿತಾಂಶ ಏನಾಯ್ತು ಅಂತ ಮಾತ್ರ ಇನ್ನೂ ಗೊತ್ತಿಲ್ಲ! ಬೇರೆ ಏನೇನೋ ಒತ್ತಡಗಳ ಕಾರಣಕ್ಕೆ ಅದನ್ನು ತಿಳಿದುಕೊಳ್ಳೋಕೇ ಹೋಗಲಿಲ್ಲ.

ಇಲ್ಲಿ ಇನ್ನು ಕೆಲವು ಅಂಶಗಳನ್ನ ಹೇಳಬೇಕು. ನಾನು ಮೊದಲಿಗೆ ಆರಂಭ ಮಾಡಿದ್ದು, 'ಕನ್ನಡ ಲೇಖಕಿಯರ ಸಂಘ'ದ ವರದಿಗಳನ್ನು ಬರೆಯುವುದರ ಮೂಲಕ. ಎಚ್.ಆರ್. ಇಂದಿರಾ ಅವರ ಮುಂದಾಳತ್ವದಲ್ಲಿ ಅದು ನಡೀತಾ ಇತ್ತು. ಅದರ ಎಲ್ಲ ಚಟುವಟಿಕೆಗಳಲ್ಲೂ ನಾನು ಸಕ್ರಿಯವಾಗಿ ಭಾಗವಹಿಸ್ತಾ ಇದ್ದೆ. ನನಗೆ ಹೊರ ಬದುಕಿನ ಪರಿಚಯ ಮಾಡಿಸಿದವರಲ್ಲಿ ಒಬ್ಬರು ಎಚ್.ಆರ್. ಇಂದಿರಾ ಅವರು, ಮತ್ತೊಬ್ಬರು ಅ.ನಾ. ಸುಬ್ಬರಾಯರು.

◆ **ನಿಮ್ಮ ಬದುಕಿನಲ್ಲಿ ಅ.ನಾ. ಸುಬ್ಬರಾಯರದ್ದು ಬಹು ದೊಡ್ಡ ಪ್ರಭಾವ ಅನ್ನಿಸುತ್ತೆ.**

ತುಂಬಾ ದೊಡ್ಡ ಪ್ರಭಾವ ಅವರದ್ದು. ಅವರು ಮತ್ತು 'ಕಲಾಮಂದಿರ', ಎ.ಎಸ್. ಮೂರ್ತಿ ಮತ್ತು ಅವರ ಹೆಂಡತಿ ಕಮಲಾ ಮೂರ್ತಿ, ಇವರೆಲ್ಲರೂ ನನ್ನ ಬದುಕಿನ ದಿಕ್ಕನ್ನೇ ಬದಲಿಸಿದರು ಎನ್ನಬೇಕು. ಮನೆಯೊಳಗಿನ ನನ್ನನ್ನು ಲೋಕ